ಓ ಎಸ್ ನಂ.17/2022
ಡಿ.ಡಬ್ಲ್ಯೂ-1 ಶಶಿಕಾಂತ ತಂದೆ ವಿಶ್ವನಾಥ ಕವಲಗಿ

**(ಇಂದು ದಿನಾಂಕಃ 13-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಆರ್ ವೈ ಡಿ ವಕೀಲರಿಂದ.

ನಮ್ಮ ತಂದೆಯ ಹೆಸರು ಕೆ ವಿಶ್ವನಾಥ ಆಗಿರುತ್ತದೆ. ನಮ್ಮ ತಂದೆಗೆ ಶಾರದಾ, ಚಂದ್ರಕಾಂತ ಮತ್ತು ಶಶಿಕಾಂತ ಎಂಬ ೩ ಜನ ಮಕ್ಕಳಿರುತ್ತೇವೆ. ನನ್ನ ಸಹೋದರ ಚಂದ್ರಕಾಂತ ಮೃತರಾಗಿರುತ್ತಾರೆ. ವಾದಿ ಶಾರದಾ ನನ್ನ ಅಕ್ಕ ಆಗಿರುತ್ತಾರೆ. ನನ್ನ ಅಜ್ಜನ ಹೆಸರು ಗುರುಲಿಂಗಪ್ಪ ಎಂದರೆ ಸರಿ. ದಾವಾ ಜಮೀನುಗಳು ನಮ್ಮ ಅಜ್ಜನಿಗೆ ಸೇರಿದ್ದವು ಎಂದರೆ ಸರಿ. ಸಾಕ್ಷಿಯು ನಮ್ಮ ಅಜ್ಜನಿಂದ ನಮ್ಮ ತಂದೆಗೆ ಮುಟೇಷನ್ ಆಗಿರುತ್ತವೆ ಎನ್ನುತ್ತಾರೆ. ನನ್ನ ಅಜ್ಜ ಗುರುಲಿಂಗಪ್ಪರವರಿಗೆ ೪ ಜನ ಹೆಣ್ಣುಮಕ್ಕಳು ಮತ್ತು ೩ ಜನ ಗಂಡು ಮಕ್ಕಳು ಇರುತ್ತಾರೆ. ನಮ್ಮ ಅಜ್ಜನಿಂದ ನಮ್ಮ ತಂದೆ ಆಸ್ತಿಗಳನ್ನು ಮಾಡಿಕೊಂಡು ನಂತರ ನಮ್ಮ ಹೆಸರಿನಲ್ಲಿ ಮಾಡಿರುತ್ತಾರೆ. ನನ್ನ ಮತ್ತು ನನ್ನ ಸಹೋದರನ ಹೆಸರಿನಲ್ಲಿ ಆಸ್ತಿ ಆಗುವಾಗ ಪಾಲು ಆಗಿರುತ್ತದೆ. ಸಾಕ್ಷಿಯು ನನ್ನ ಅಕ್ಕಳಾದ ವಾದಿಯನ್ನು ಕೇಳಿಯೆ ಪಾಲು ಆಗಿರುತ್ತದೆ ಎನ್ನುತ್ತಾರೆ. ನಮ್ಮ ನಡುವೆ ಆದ ಪಾಲಿನ ಕುರಿತು ಯಾವುದೆ ಪಾಲುಪತ್ರ ದಾಖಲೆ ಆಗಿರುವುದಿಲ್ಲ. ಸಾಕ್ಷಿಯು ನಮ್ಮ ತಂದೆ ಮುಟೇಷನಲ್ಲಿಯೆ ಬರೆಸಿರುತ್ತಾರೆ ಎನ್ನುತ್ತಾರೆ. ಏನಾದರೂ ತೊಂದರೆಯಾದರೆ ನಾನೆ ಹೊಣೆಗಾರನಿರುತ್ತೇನೆ ಎಂದು ನಮ್ಮ ತಂದೆ ಬರೆಸಿರುತ್ತಾರೆ ಎಂದು ಸಾಕ್ಷಿಯು ಮುಂದುವರೆದು ಹೇಳುತ್ತಾರೆ. ನಮ್ಮ ಹೆಸರಿನಲ್ಲಿ ಜಮೀನು ಆಗುವಾಗ ವಂಶಾವಳಿ ದಾಖಲೆ ಹಾಜರುಪಡಿಸಿರುತ್ತೇವೆ. ಅದರಲ್ಲಿ ನನ್ನ ಅಕ್ಕಳಾದ ವಾದಿಯ ಹೆಸರು ಬರೆಸಿರುವುದಿಲ್ಲ. ಸಾಕ್ಷಿಯು ಸದರಿ ವಿಚಾರಗಳನ್ನು ನಮ್ಮ

ತಂದೆಯೆ ಬರೆಸಿರುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ವಾದಿಗೆ ಹೇಳದೆ ಕೇಳದೆ ನಾನು ಮತ್ತು ನನ್ನ ಸಹೋದರ ನಮ್ಮ ಹೆಸರಿನಲ್ಲಿ ಜಮೀನು ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಎಲ್ಲ ಮಾಡಿರುವುದು ನಮ್ಮ ತಂದೆಯೆ ಅದರ ಕುರಿತು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಜಮೀನುಗಳಲ್ಲಿ ವಾದಿಗೂ ಕೂಡಾ ಹಕ್ಕು ಇದ್ದರೂ ಸಹ ಅವರಿಗೆ ಹೇಳದೆ-ಕೇಳದೆ ದಾವಾ ಜಮೀನುಗಳನ್ನು ನಮ್ಮ ಹೆಸರಿನಲ್ಲಿ ನಾವು ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಅದನ್ನು ನಮ್ಮ ತಂದೆಯವರನ್ನೇ ಕೇಳಿ ಎನ್ನುತ್ತಾರೆ.

೨. ನನ್ನ ಮುಖ್ಯ ವಿಚಾರಣೆಯಲ್ಲಿನ ವಿಷಯಗಳ ಬಗ್ಗೆ ನನಗೆ ಗೊತ್ತು. ನಮ್ಮ ತಂದೆಯ ಹೆಸರಿನಲ್ಲಿ ಪ್ಲಾಟ ನಂಬರ ೭೩ ಎಂದು ಇತ್ತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ೧೯೮೩-೮೪ ರಲ್ಲಿ ಸದರಿ ಪ್ಲಾಟ ನಮ್ಮ ತಂದೆಯ ಹೆಸರಿನಲ್ಲಿ ಇತ್ತು. ಸದರಿ ಪ್ಲಾಟ ಈಗ ವಾದಿಯ ಗಂಡನಾದ ಮರಳಪ್ಪನ ಹೆಸರಿನಲ್ಲಿ ಇದೆ ಎಂದರೆ ಸರಿ. ನಮ್ಮ ತಂದೆ ಸದರಿ ಮರಳಪ್ಪರವರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಏಕೆ ಮಾಡಿಕೊಟ್ಟಿರುತ್ತಾರೆ ಎಂದು ಕೇಳಿ ಹೇಳುತ್ತೇನೆ ಎನ್ನುತ್ತಾರೆ. ಮರಳಪ್ಪರವರು ೨೦ ಸಾವಿರ ರೂಪಾಯಿಗೆ ಸದರಿ ಪ್ಲಾಟನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನನ್ನ ಮಾವ ಮರಳಪ್ಪ ೧೯೭೪ ರಲ್ಲಿ ಬ್ಯಾಂಕಿನಲ್ಲಿ ನೌಕರಿ ಮಾಡುತ್ತಿದ್ದು, ನಂತರ ಬ್ಯಾಂಕಿನಿಂದ ಸಾಲ ಪಡೆದು, ಸದರಿ ಪ್ಲಾಟಿನಲ್ಲಿ ಮನೆ ಕಟ್ಟಿರುತ್ತಾರೆ ಎನ್ನುತ್ತಾರೆ. ಆ ಸಮಯದಲ್ಲಿ ನನಗೆ ೨೧ ವರ್ಷ ವಯಸ್ಸು ಇತ್ತು ಎಂದರೆ ಸರಿ. ೧೯೭೪ ರಲ್ಲಿ ಸದರಿ ಪ್ಲಾಟಿನಲ್ಲಿ ನನ್ನ ಮಾವ ಮನೆ ಕಟ್ಟಿರುತ್ತಾರೆ. ನಾನು ಮನೆಯ ಗೃಹ ಪ್ರವೇಶಕ್ಕೆ ಹೋಗಿದ್ದೆ. ಸದರಿ ಖರೀದಿ ಪತ್ರವನ್ನು ನಾವು ಯಾವತ್ತು ಪ್ರಶ್ನಿಸಿರುವುದಿಲ್ಲ. ಸಾಕ್ಷಿಯು

ಮುಂದುವರೆದು ನಮ್ಮ ತಂದೆ ದೊಡ್ಡವರು ಇದ್ದು, ಅವರು ಮಾರಾಟ ಮಾಡಿರುವುದರಿಂದ ನಾವು ಅದನ್ನು ಕೇಳಿಲ್ಲ ಎನ್ನುತ್ತಾರೆ.

೩. ನಿಡಿ-೩ ವಂಶಾವಳಿಯ ದಾಖಲೆಯಲ್ಲಿ ವಾದಿ ಶಾರದಾಬಾಯಿಯ ಹೆಸರನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಪ್ಲಾಟನ್ನು ವಾದಿಯ ಗಂಡ ಖರೀದಿ ಮಾಡಿರುತ್ತಾರೆ ಅದನ್ನು ಪಾಲು ಎಂದು ವಾದಿಗೆ ನೀಡಿಲ್ಲ ಎಂದರೆ ಸಾಕ್ಷಿಯು ಕಾನೂನು ಪ್ರಕಾರ ಅದು ನಿಜವಿರುತ್ತದೆ, ಆದರೆ ನಮ್ಮ ತಂದೆ ನಮ್ಮ ಅಕ್ಕನಿಗೆ ಪ್ಲಾಟನ್ನು ನೀಡಿರುತ್ತೇನೆ ನೀವು ಜಮೀನು ತೆಗೆದುಕೊಳ್ಳಿ ಎಂದು ಮೌಖಿಕವಾಗಿ ಹೇಳಿರುತ್ತಾರೆ ಎನ್ನುತ್ತಾರೆ. ನಾನು ಹೇಳಿದಂತೆ ಪಾಲಿನಲ್ಲಿ ಸದರಿ ಪ್ಲಾಟನ್ನು ವಾದಿಗೆ ನೀಡಿಲ್ಲ, ಅದನ್ನು ವಾದಿಯ ಗಂಡ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಲ್ಲಿ ಸ್ವಲ್ಪ ಜಮೀನು ರಾಷ್ಟ್ರೀಯ ಹೆದ್ದಾರಿಗೆ ಭೂ-ಸ್ವಾಧೀನಗೊಂಡಿದೆ ಎಂದರೆ ಸರಿ. ಭೂ-ಸ್ವಾಧೀನದ ಪರಿಹಾರದಲ್ಲಿ ವಾದಿ ಮತ್ತು ಪ್ರತಿವಾದಿಗಳಾದ ೧ ರಿಂದ ೩ ರವರಿಗೆ ಎಲ್ಲರಿಗೂ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಹೆಸರಿನಲ್ಲಿ ಇದ್ದ ಜಮೀನು ಭೂ-ಸ್ವಾಧೀನ ಆಗಿದೆ ನಾನು ಮಾತ್ರ ಅದಕ್ಕೆ ಹಕ್ಕುದಾರ ಎನ್ನುತ್ತಾರೆ. ಪರಿಹಾರದ ಹಣದಲ್ಲಿ ಪಾಲು ಕೇಳಿದಾಗ ನಾನು ವಾದಿಗೆ ಪಾಲು ನೀಡದ ಕಾರಣ ವಾದಿ ಈ ದಾವೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಪಂಚಾಯಿತಿ ಮಾಡೋಣ ಎಂದು ಹೇಳಿದರೂ ಕೂಡಾ ವಾದಿ ಕೇಳಿರುವುದಿಲ್ಲ ಎನ್ನುತ್ತಾರೆ. ದಾವಾ ಜಮೀನುಗಳಲ್ಲಿ ವಾದಿಗೆ ಕೂಡಾ ಪಾಲು ಇರುತ್ತದೆ ಎಂದರೆ ಸಾಕ್ಷಿಯು ಜಮೀನಿನಲ್ಲಿ ಪಾಲು ಬೇಕು ಅಥವಾ ಹಣದಲ್ಲಿ ಪಾಲು ಬೇಕೋ ಎಂದು ಹೇಳಿರುತ್ತಾರೆ. ನಾನು ವಾದಿಗೆ ಪಾಲು ನೀಡಬಾರದು ಎಂದ ಉದ್ದೇಶದಿಂದ ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.